368

ಮೈಸೂರ ಗಿಜಿಟ್.

ಸರ್ಕಾರದಿಂದ ಫಾಂಯಿಷ್ ಆದ್ದು.

ಬೆಂಗಳೂರು, ಗುರುವಾರ, ಮೇ ತಾ॥ 7, ಸ್ಯ 1896.

III‍ನೇ ಭಾಗ.

ಮೈಸೂರು ಗವರ್ಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷ್ಯನ್‌ಗಳು.

GOVERNMENT OF MYSORE.

ಮೈಸೂರ್ ಗವರ್ಮೆಂಟ್.

LEGISLATIVE DEPARTMENT.

ಲೆಜಿಸ್ಲೇಟಿವ್ ಇಲಾಖೆ.

REGULATION No. I OF 1896.

1896‍ನೇ ಇಸವಿಯ 1‍ನೇ ನಂಬರ್ ರೆಗ್ಯುಲೇಷ್ಯನ್.

(1896‍ನೇ ಇಸವಿ ಫೆಬ್ರವರಿ 18‍ನೇ ತಾರೀಖಿನ ದಿನ ಮಂಜೂರಾದ್ದು)

ಮೈಸೂರ ಗವರ್ಮೆಂಟಿನ ಮೇಲೆ ಬ್ರಿಜಲಾಲ್‌ದಾಸ್ ಎಂಬುವನ ದಾವೆ ವಿಚಾರದಲ್ಲಿ ಅಪ್ಪೀಲ್ ಫೈಸಲನ್ನು ಕೊಡಲು ಬಂದು ಸ್ಪೆಷಲ್ ಕೋರ್ಟನ್ನು ಹೊಕರ್ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷ್ಯನ್.

ಪೀಠಿಕೆ.

ಘನವನ್ನೆ ಳೆದಿವ ಶ್ರೀಮರ್ಮ ಮಹಾರಾಜರವರಾದ III‍ನೇ ಕೃಷ್ಣರಾಜವಡೆಯರವರ ಮೇಲೆ ತರಲ್ಪಟ್ಟ ದಾವೆಗಳನ್ನೆಲ್ಲ ವ್ಯವಸ್ಥೆ ಮಾಡಲು ಸುಪ್ರೀಂ ಅಂದರೆ ಇಂಡಿಯಾ ಗವರ್ಮೆಂಟಿನವರೆ ಮಂಜೂರಾಶಿ ಮತ್ತು ಅಪ್ಪಣೆಯನುಸಾರವಾಗಿ ಮೈಸೂರ ಕಮ್ಮಿಷನರವರು ಅಪ್ಪಗ್ರಾಮದ ಡಿವಿಜ್ ಸೂಪರ್‌ಟೆಂಡೆಂಟರಾದ ಕ್ಯಾಪ್ಟೆರ್ಟ್ ಯಲಿಯಟ್ ಸಿ. ಬಿ. ಸಾಹೆಬರನ್ನೂ ದರಬಾರ್ ಸರ್ಜ್ಜರಾದ ಜೆ. ಸಿ. ಕ್ಯಾಂಬಲ್ ಸಾಹೆಬರನ್ನೂ ಹೊಕರಮ್ಮಾಡಿದರು. ಇವರಿಬ್ಬರೂ ನೇರಿ 1864‍ನೇ ಇಸವಿ ಡಿಸೆಂಬರ್ 23‍ನೇ ತಾರೀಖಿನಲ್ಲಿ ಈ ವಿಷಯದಲ್ಲಿ ಮಾಡಿದ ತೀರ್ಪಿನ ಪ್ರಕಾರ ಫಾತಿಯಾಗಿದ್ದ ದಾವೋದರ ದಾಸನೆಂಬುವನ ವಾರಸುದಾರ ಮತ್ತು ಖಾಯಿದೆಗೊಪ್ಪಿದ ಪ್ರತಿನಿಧಿಯಾದ ಫಾತಿ ಬ್ರಿಜಲಾಲ್‌ದಾಸನೆಂಬುವನಿಗೆ, ಅತನಿಗಿದ್ದ ಹಕ್ಕುಗಳೆಲ್ಲಾ ಪೂರಾ ಫೈಸಲಾಗಿ ಹೋಗುವಂತೆ, ರೂ. 5,67,338-15-1 ಮೊತ್ತವು ಕೊಡಲ್ಪಡಬೇಕಾಯಿತು. ಸದರೀ ಮೊಬಲಗನ್ನು ಈಗ ಮೈಸೂರ್ ಸರ್ಕಾರದಿಂದ ಬರಮಾಡಿಕೊಳ್ಳಲು ಖಾಯಿದೆಗೆ ಅನುಸಾರವಾಗಿ ಯಾರಿಗೂ ಹಕ್ಕಿಲ್ಲದೆ ಇದ್ದರೂ, ಸದರೀ ಬ್ರಿಜಲಾಲ್‌ದಾಸನ ವಾರಸುದಾರು ಮತ್ತು ಖಾಯಿದೆಗೆ ಸರಿಯಾದ ಪ್ರತಿನಿಧಿಗಳೆಂದು ತೀರ್ಮಾನಿಸಲು ಅಧಿಕಾರಹೊಂದಿವ ಕೋರ್ಟಿನಿಂದ ಗೊತ್ತು ಮಾಡಲ್ಪಡಬಹುದಾದ ಇಸಂ ಆಥವಾ ಇಸುಗಳಿಗೆ ಸದರೀ ಮೊಬಲಗನ್ನು, ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ ಸ್ಥೀರಿಸಬಹುದಾದ ತಕ್ಕ ಷರತ್ತುಗಳಿಗೊಳಪಡಿಸಿ, ಧಾರಾಳವಾಗಿ ಕೊಟ್ಟು ಬಿಡಬೇಕೆಂದು ಮೈಸೂರ್ ಗವರ್ಮೆಂಟಿ

ನವರು ಇಷ್ಟಪಟ್ಟದಾರೆ. ಈ ಯಿಭ್ಹಾನುಸಾರವಾಗಿ ಸದರೀ ರೂ. 5,67,338—15—1 ಮೊತ್ತವನ್ನು ಬರ
ಮಾಡಿಕೊಳ್ಳಲು ಅಪೇಕ್ಷಿಸುವ ಜನಗಳೆಲ್ಲ ತಮ್ಮ ದಾವೆಗಳನ್ನು ಮೈಸೂರ ಚೀಫ್ ಕೋರ್ಟಿನ ರಿಜಿಸ್ಟ್ರಾರವರ
ಆಫೀಸಿನಲ್ಲಿ ದಾಖಲ್ಮಾಡಬೇಕೆಂತಲೂ, ಅಂತ ದಾವೇಗಳ ವ್ಯವಸ್ಥೆಯ ಬಗ್ಯಾಗಿ ಬಂದು ಸ್ಪೆಷಲ್ ಕೋರ್ಟನ್ನು ಏರ್ಪ
ಡಿಸುವ ಉದ್ದೇಶ ತಿಳಿಗಿರುವದಾಗಿಯೂ, ಮೈಸೂರ್ ಗವರ್ಮೆಂಟಿನವರು 1895ನೇ ಇಸವಿ ಅಕ್ಟೋಬರ್
8ನೇ ಮತ್ತು೦ ಮೈಸೂರ್ ಮೊಕ್ಕಾವಿನ C. 42ನೇ ನಂಬರ್ ಇಸ್ತಿಹಾರನ್ನು ಸಾದರ್ಮಾಡಿರುತ್ತಾರೆ. ಆದ್ದರಿಂದ
ಘನವನ್ನೈದಿದ ಶ್ರೀಮತ್ ಮಹಾರಾಣಿ ರೀಜಂಟರವರು ಕಳಗೆ ನಮೂದಿಸಿರುವಂತೆ ವಿಧಿಸಿರುತ್ತಾರೆ:—

ಸ್ಪೆಷಲ್ ಕೋರ್ಟಿನ ಏರ್ಪಾಡು.

1. (1) ಮೈಸೂರ ಗವರ್ಮೆಂಟಿನವರು ಬಂದು ಸ್ಪೆಷಲ್ ಕೋರ್ಟನ್ನು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾ
ರಿನ ಮೂಲಕ ಏರ್ಪಡಿಸಿ ಅಂತಾ ಸ್ಪೆಷಲ್ ಕೋರ್ಟಿನ ಜಡ್ಜಿಗಳಾಗಿ ಇಬ್ಬ
ರು ಕಮ್ಮಿಷನರುಗಳನ್ನು ಮೊಕರರ್ಮಾಡತಕ್ಕದ್ದು.

(2) ಸದರೀ ಸ್ಪೆಷಲ್ ಕೋರ್ಟಿಗೆ ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು,

(a) ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ 5,67,338—15—1 (ಐದುಲಕ್ಷವೂ ಆರೆವತ್ತೇಳುಸಾ
ವಿರದ ಮುನ್ನೂರಮೂವತ್ತೆಂಟು ರೂಪಾಯಿಗಳು, ಹವಿನ್ಯೆದು ಆಣೆ, ಬಂದುಪ್ಯೆ)ನ ಮೊಬಲಗು
ಸದರೀ ಬ್ರಿಜಲಾಲ್‌ದಾಸನ ವಾರಸುದಾರರು ಮತ್ತು ಖಾಯಿದೆಯ ಪ್ರಕಾರ ಪ್ರತಿನಿಧಿಗಳು ದೂ
ರಾದರೂ ಯಿದ್ದು ಅವರಿಗೆ ಸಲ್ಲಬೇಕಾದರೆ ಅಂತಾ ಮನುಷ್ಯ ಅಥವಾ ಮನುಷ್ಯರು ಯಾರೆಂಬ
ವಿಷಯದಲ್ಲಿಯೂ,

(b) ಮೇಲೆ ನಮೂದಿಸಲ್ಪಟ್ಟ ಸಂದಾಯಕ್ಕೆ ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ
ಲಗತ್ತಾಗಿರಬೇಕಾದ ಷರತ್ತುಗಳು ಮತ್ತು ಭರವಸೆಗಳೇನಾದರೂ ಇದ್ದರೆ ಅಂತವುಗಳನ್ನು ಕು
ರಿತೂ ವಿಚಾರಣೆಯನ್ನು ಮಾಡಿ ನಿರ್ಣೈಸಿ ಅಪೈರ್ ಫೈಸಲನ್ನು ಕೊಡುವಧಿಕಾರವಿರತಕ್ಕದ್ದು.

(3) ಈ ಪ್ರಕರಣ ಪ್ರಕಾರ ಮೊಕರರಾದ ಒಬ್ಬ ಕಮ್ಮಿಷನರಿನ ಮರಣ, ರಾಜೀನಾಮೆ, ಅಥವಾ ಅಸ
ಮರ್ಥತೆಯಸಂದರ್ಭದಲ್ಲಿ, ಅಂಥಾ ಕಮ್ಮಿಷನರಿಗೆ ಬದಲಾಗಿ ಮತ್ತೊಬ್ಬರನ್ನು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರ್
ಮೂಲಕ ಮೈಸೂರ್ ಗವರ್ಮೆಂಟಿನವರು ಮೊಕರರ್ಮಾಡತಕ್ಕದ್ದು.

ಪೀಠಿಕೆಯಲ್ಲಿ ನಮೂದಾಗುವ ನೋಟಿಸಿನಂತೆ ನಡಿಯದೆ ತಪ್ಪುವದರ ಫಲ.

2. ಸದರೀ ಸ್ಪೆಷಲ್ ಕೋರ್ಟ್‌ನವರು, ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ ಇಸ್ತಿಹಾರಿನಲ್ಲಿ ಗೊತ್ತು
ಮಾಡಲ್ಪಟ್ಟಿರುವ ವಾಯಿದೆಯೊಳಗಾಗಿ ಮತ್ತು ರೀತಿಯಂತೆ ಸರಿಯಾಗಿ
ದಾಖಲ್ಮಾಡಲ್ಪಡದೆ ಹೋದ ಯಾವ ದಾವೆಯನ್ನೂ ಹಿಡಿಯತಕ್ಕದ್ದಲ್ಲ,
ಮತ್ತು ಹಾಗೆ ದಾಖಲ್ಮಾಡಲ್ಪಡದೆಹೋದ ಎಲ್ಲಾ ದಾವೆಗಳೂ ಏಂದೆಂದಿಗೂ
ರದ್ದಾದವೆಂತಲೂ ಪುನಃ ಯಾವ ಬಗೆಯಾಗಿಯೂ ಉಜ್ಜೀವಿಸುವದಕ್ಕೆ ಅಯೋಗ್ಯವಾದವೆಂತಲೂ, ಭಾವಿಸಲ್ಪಡತ
ಕ್ಕದ್ದು.

ದಾಖಲ್ಮಾಡಲ್ಪಟ್ಟ ದಾವೆಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಹಾಜರ್ಮಾಡಿಸಿಕೊಳ್ಳಲು ಕಮ್ಮಿಷನರುಗಳಿಗೆ ಅಧಿಕಾರ.

3. ಸದರೀ ಸ್ಪೆಷಲ್ ಕೋರ್ಟಿನವರಿಗೆ, ತಮ್ಮ ರೂಬರೂ ದಾಖಲ್ಮಾಡಲ್ಪಟ್ಟಿರುವ ದಾವೆಗಳಿಗೆ ಸಂಬಂಧಿ
ಸಿದ ಅಥವಾ ತಮ್ಮ ರೂಬರೂ ನಡಿಯುವ ವಿಚಾರಣೆಗೆ ಮುಖ್ಯವಾ
ದ್ದೆಂದು ಭಾವಿಸಲ್ಪಡಬಹುದಾದ ಯಾವ ಆಜ್ಞಾಪತ್ರಿಕೆಗಳು, ಡಿಕ್ರಿಗಳು,
ಜಡ್ಜ್‌ಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾ
ಗೀನಾಗಳು, ಪ್ಲೀಡಿಂಗ್ಸು ಅಂದರೆ ಪ್ರತಿವಾದನಗಳು, ಪುಸ್ತುಕಗಳು,
ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಒರವಣಿಗೆಗಳನ್ನೂ, ಅವು ಯಾವ ಮನುಷ್ಯನೆ,
ಜಡ್ಜಿಯ ಅಥವಾ ಕೋರ್ಟಿನ ಸ್ವಾಧೀನದಲ್ಲಿದ್ದಾಗ್ಯೂ, ತಗಾವೆಹಚ್ಚಿ ಹಾಜರ್ಮಾಡಿಸಿಕೊಳ್ಳೋಣ ನ್ಯಾಯವಾಗಿರ
ತಕ್ಕದ್ದು; ಮತ್ತು ಅಂತಾ ಮನುಷ್ಯ, ಜಡ್ಜಿ ಅಥವಾ ಕೋರ್ಟು ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಉದ್ಯೋ
ಗಸ್ಥ ಅಥವಾ ಮನುಷ್ಯನಿಗೆ ನೋಟಿಸ್ ಕೊಡಲ್ಪಟ್ಟ ಮೇಲೆ, ಸದರೀ ನೋಟಿಸಿನಲ್ಲಿ ಕಂಡ ಆಜ್ಞಾಪತ್ರಿಕೆಗಳು,
ಡಿಕ್ರಿಗಳು, ಜಡ್ಜ್‌ಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾಗೀನಾಗಳು, ಪ್ಲೀಡಿಂಗ್ಸು
ಅಂದರೆ ಪ್ರತಿವಾದನಗಳು, ಪುಸ್ತುಕಗಳು, ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಒರವ
ಣಿಗೆಗಳನ್ನು ಸದರೀ ನೋಟಿಸಿನಲ್ಲಿ ನಿರೂಪಿಸಲ್ಪಟ್ಟಿರುವ ರೀತಿಯಲ್ಲಿ ಸದರೀ ಸ್ಪೆಷಲ್ ಕೋರ್ಟಿನವರಿಗೆ ಕೂಡ್ಲೆ
ಒಪ್ಪಿಸಿಬಿಡಲ್ಪಡತಕ್ಕದ್ದು. ಹೀಗೆ ನಡಿಸಲು ಯಾವ ವಿಧವಾಗಿ ವಿರೋಧವಾದ ಯಾವ ಆಕ್ಟು, ರೆಗ್ಯುಲೇಷನ್,
ಮಾಮೂಲ್ ಅಥವಾ ಪದ್ಧತಿ ಇದ್ದಾಗ್ಯೂ, ಚಿಂತೆ ಯಿಲ್ಲ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ ಮೇರೆಗೆ ಹ್ಯಾಗೋ ಹಾಗೆ ಸಾಕ್ಷಿಗಳು ಮಸ್ತೆರೆ ಬ್ಯೆಸ ಮಾಡಲು ಕಮ್ಮಿಷನರುಗಳಿಗೆ ಅಧಿಕಾರ.

4. ಸದರೀ ಸ್ಪೆಷಲ್ ಕೋರ್ಟಿನವರಿಗೆ, ಸಾಕ್ಷಿಗಳಿಗೆ ಸಮ್ಮ ಮಾಡಿ ಅವರ ಸಾಕ್ಷ್ಯವನ್ನು ತೆಗಿಯೋಣ
ವೂ, ಆ ಬಗ್ಯಾಗಿ ಸಿವಿಲ್ ಪ್ರೊಸೀಜ್ಯೂರ್ ಕೋಡಿನಿಂದ ಬಂದು ಸಿವಿಲ್
ಕೋರ್ಟಿನ ವಿಚಾರದಲ್ಲಿ ವಿಧಿಸಲ್ಪಟ್ಟಿರುವಂತೆ ಸಾಧ್ಯವಾದ ಮಟ್ಟಿಗೂ
ಆದೇ ರೀತೀಲಿ ಮತ್ತು ಆದೇ ಸಾಧನಗಳ ಮೂಲಕವಾಗಿ ಸಾಕ್ಷಿಗಳ
ಮತ್ತು ಪುಸ್ತಕಗಳು, ಲೆಕ್ಕಗಳು, ಕಾಗದಗಳು, ಪತ್ರಗಳು ಅಥವಾ ಇತರ
ರ.

ದಸ್ತಾವೇಜುಗಳ ಹಾಜರಾತಿಯನ್ನು ಬಲಾತ್ಕರಿಸೋಣವೂ, ಈ ಪ್ರಕರಣ ಪ್ರಕಾರ ಮಾಡಲ್ಪಟ್ಟ ಯಾವ ಹುಕುಮಿಗಾದರೂ ಅವಿಧೇಯತ್ವ ನಡದಲ್ಲಿ ಆ ಬಗ್ಗೆ ಒಂದುನೂರು ರೂಪಾಯಿಗಳಿಗೆ ಮಿಂಚದೊಂದು ಜುರ್ಮಾನೆಯನ್ನು ವಿಧಿಸೋಣವೂ ನ್ಯಾಯವಾಗಿರತಕ್ಕದ್ದು.

ಪ್ರಮಾಣವನ್ನು ಮಾಡಿಸಲು ಕಮ್ಮಿಷನರುಗಳಿಗೆ ಅಧಿಕಾರ.

5. ಸದರೀ ಸ್ಪೆಷಲ್ ಕೋರ್ಟನವರು ಈ ರೆಗ್ಯುಲೇಷ್ಷ ಪ್ರಕಾರ ವಿಚಾರಿಸಲ್ಪಡುವ ಸಂಗತಿಗಳ ಪೈಕಿ ಯಾವದಕ್ಕೆ ಸಂಬಂಧಿಸಿಯಾದರೂ ತಮ್ಮ ರೂಬರೂ ತನಿಖೆ ಮಾಡಲ್ಪಡುವ ಯಾವ ಮನುಷ್ಯನಿಗಾದರೂ ತಮಿಗೆ ಯುಕ್ತವೆಂದು ತೋಚಬಹುದಾವ ಬಗೆಯಿಂದ ಪ್ರಮಾಣ ಅಥವಾ ಸತ್ಯವನ್ನು ಮಾಡಿಸಬಹುದು.

ಕಮ್ಮಿಷನರುಗಳ ರೂಬರೂ ನಡಿಸಲ್ಪಡುವ ವಿಚಾರಣೆಗಳು, ಕೊಡಲ್ಪಡುವ ವಾಜಿಬ್ಮಿಲಗಳು, ಇಂಡಿಯ್ಯನ್ ಪೀನಲ್ ಕೋಡಿನ ಅರ್ಥ ವಿವರಣೆ ಪ್ರಕಾರ "ಜುಡಿಷಿಯಲ್ ಪ್ರೊಸೀಡಿಂಗ್ಸ್" ಮತ್ತು "ಎವಿಡೆನ್ಸ್" ಆಗಿರತಕ್ಕದ್ದು.

6. ಸದರೀ ಸ್ಪೆಷಲ್ ಕೋರ್ಟ್‌ನಿಂದ, ಈ ರೆಗ್ಯುಲೇಷ್ಷ ಮೇರಿಗೆ ಆ ಕೋರ್ಟನಲ್ಲಿ ದಾಖಲಾದ ಯಾವ ದಾವರೂ ದಾವೆಯನ್ನು, ಅಥವಾ ಅಂತ ಯಾವ ದಾವೆಗಾದರೂ ಸಂಬಂಧಿಸಿವ ಯಾವದಾದರೂ ಸಂಗತಿಯನ್ನು ಕುರಿತು, ಮಾಡಲ್ಪಡುವ ಪ್ರತಿ ವಿಚಾರಣೆಯೂ ಇಂಡಿಯ್ಯನ್ ಪೀನಲ್ ಕೋಡಿನ ಅರ್ಥ ವಿವರಣೆಯಂತೆ ಒಂದು "ಜುಡಿಷಿಯಲ್ ಪ್ರೊಸೀಡಿಂಗ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು. ಮತ್ತು ಅಂತ ವಿಚಾರಣೆಗೆ ಸಂಬಂಧವಾಗಿ, ಪ್ರಮಾಣದ ಮೇಲಾಗಲಿ ಅಥವಾ ಪ್ರಮಾಣ ವಿಲ್ಲವೆಯಾಗಲಿ, ಸದರೀ ಸ್ಪೆಷಲ್ ಕೋರ್ಟನಿಂದ ಅಥವಾ ಅದರ ರೂಬರೂ ವಿಚಾರಿಸಲ್ಪಡುವ ಯಾವ ಮನುಷ್ಯನಿಂದಲಾದರೂ ಕೊಡಲ್ಪಡುವ ಪ್ರತಿ ವಾಜಿಬ್ಮಿಲವೂ ಅದೇ ಕೋಡಿನ ಅರ್ಥವಿವರಣೆಯಂತೆ "ಎವಿಡೆನ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು.

ಸ್ಪೆಷಲ್ ಕೋರ್ಟನ ಆಡಳಿತಗಳು ಹ್ಯಾಗೆ ನಡಿಸಲ್ಪಡತಕ್ಕದ್ದು.

7. (1) ಸದರೀ ಸ್ಪೆಷಲ್ ಕೋರ್ಟನ ಆಡಳಿತಗಳು ಅಸಲ್ ದಾವೆಗಳ ವಿಚಾರಣೆ ವಿಷಯದಲ್ಲಿ 1884ನೇ ಇಸವಿ IIನೇ ನಂಬರ್ ರೆಗ್ಯುಲೇಷನಾದ ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿರುವ ನಿಬಂಧನೆಗಳಂತೆ ನಡಿಸಲ್ಪಡತಕ್ಕದ್ದು.

(2) ಸದರೀ ಸ್ಪೆಷಲ್ ಕೋರ್ಟನವರು ಸಾಮಾನ್ಯವಾಗಿ ಬೆಂಗಳೂರಲ್ಲಿ ಕೂಡತಕ್ಕದ್ದು.

(3) ಸದರೀ ಸ್ಪೆಷಲ್ ಕೋರ್ಟಗೆ ರಿಜಿಸ್ಟ್ರಾರಾಗಿ ಒಬ್ಬ ಆಫಿಸರನ್ನು ಮೈಸೂರ್ ಗವರ್ನಮೆಂಟಿನವರು ನೇಮಕರ್ನಾಡತಕ್ಕದ್ದು, ಮತ್ತು ಅಂತ ರಿಜಿಸ್ಟ್ರಾರು, ಸದರೀ ಸ್ಪೆಷಲ್ ಕೋರ್ಟನವರು ಆಗಿಂದ್ಯಾಗೆ ನಿಯಮಿಸಬಹುದಾದಂತೆ, ಮಂತ್ರಿತ್ವ ಸ್ವಭಾವದ ಅಧಿಕಾರಗಳನ್ನು ಮತ್ತು ಕೆಲಸಗಳನ್ನು ನಡಿಸತಕ್ಕದ್ದು.

ದಾವೆಗಳನ್ನು ಫೈಸಲ್ಮಾಡೋಣದರಲ್ಲಿ ಸ್ಪೆಷಲ್ ಕೋರ್ಟಿನಿಂದ ಉಪಯೋಗಿಸಲ್ಪಡಬೇಕಾದ ಕಾನೂನು.

8. ಸದರೀ ಸ್ಪೆಷಲ್ ಕೋರ್ಟನವರು, ವಂಶಾವಳಿ, ದಾಯಬಾಧ್ಯತೆ, ಮದುವೆ, ಅಥವಾ ಜಾತಿ ಅಥವಾ ಯಾವದಾದರೂ ಮತಸಂಬಂಧವಾದ ಮಾಮೂಲ್ ಅಥವಾ ಏರ್ಪಾಡಿನ ವಿಚಾರವಾದ ಯಾವದಾದರೂ ಪ್ರಮೇಯವನ್ನು ತೀರ್ಮಾನಿಸೋಣ ಅವಶ್ಯಕವಾದಾಗ,—

(a) ಹಿಂದೂ ಲಾ, ಅಥವಾ

(b) ಕಾನೂನಿನ ಬಲೀಯಉಳ್ಳದ್ದಾಗಿಯೂ ವ್ಯವಹಾರಕ್ಕೆ ಸಂಬಂಧಿಸಿದ ಕಕ್ಷಿಗಾರ್ರಿಗೆ ಅಥವಾ ಸ್ವತ್ತಿಗೆ ವ್ಯವಸ್ಥಾಪಕವಾಗಿಯೂ ಯಾವದಾದರೂ ಪದ್ಧತಿ ಇದ್ದಲ್ಲಿ ಅಂತ ಪದ್ಧತಿಯೊ,

ಅಂತಾ ಲಾ ಅಥವಾ ಪದ್ಧತಿ ಖಾಯಿದೆ ಮಾಡುವ ಇಲಾಖೆಯ ಖಾಯಿದೆ ಯಿಂದ ವೈತ್ಯಾಸ ಪಡಿಸಲ್ಪಟ್ಟು ಅಥವಾ ಮೌಖೂಫ್ ಮಾಡಲ್ಪಡದಿದ್ದರೆ, ಸದರೀ ಕೋರ್ಟನವರ ತೀರ್ಪಿನ ವಿಧಿಯಾಗಿರತಕ್ಕದ್ದು.

(c) ವಿಶೇಷ ವಿಧಿಯಿಲ್ಲದ ಸಂದರ್ಭಗಳಲ್ಲಿ, ಸದರೀ ಸ್ಪೆಷಲ್ ಕೋರ್ಟನವರು ನ್ಯಾಯ, ನೀತಿ ಮತ್ತು ಸದ್ಧರ್ಮದ ಪ್ರಕಾರ ಫೈಸಲ್ಮಾಡತಕ್ಕದ್ದು.

ಕಾಲನಿಬಂಧನೆ ಸಬಬಿನ ಮೇಲೆ ದಾವೆಗಳು ತಿರಸ್ಕರಿಸಲ್ಪಡಕೂಡದು.

9. (1) ಈ ರೆಗ್ಯುಲೇಷ್ಷ ಪ್ರಕಾರ ಸದರೀ ಸ್ಪೆಷಲ್ ಕೋರ್ಟಗೆ ದಾಖಲಾಗುವ ಯಾವ ದಾವೆಯೂ ಅದಕ್ಕೆ ಲಗಾವಾಗುವ ಸಾಧಾರಣ "ಕಾಲನಿಬಂಧನೆ ಕಾನೂನಿ"ನ ಕಾರಣದಿಂದ ತಿರಸ್ಕರಿಸಲ್ಪಡಕೂಡದು.

ಸ್ಟ್ಯಾಂಪು ಡ್ಯೂಟಿಯ ಮಾಫಿ.

(2) ಸದರೀ ಸ್ಪೆಷಲ್ ಕೋರ್ಟನಲ್ಲಿ ದಾವೇದಾರ್ರಿಂದ ದಾಖಲ್ಮಾಡಲ್ಪಡುವ ದಾವೆಗಳ ಮೇಲಾಗಲಿ ದಸ್ತಾವೇಜುಗಳ ಮೇಲಾಗಲಿ ಸ್ಟ್ಯಾಂಪುಗಳು ವಸೂಲ್ಮಾಡಲ್ಪಡತಕ್ಕದ್ದಿಲ್ಲ.

10. ವ್ಯವಹಾರದಲ್ಲಿರುವ ಯಾವದಾದರೂ ವಿಶೇಷಾಂಶದ ವಿಷಯದಲ್ಲಿ ಸದರೀ ಸ್ಪೆಷಲ್ ಕೋರ್ಟಿಗೇರ್ಪಡುವ ಇಬ್ಬರು ಕಮ್ಮಿಷನರುಗಳಿಗೆ ಪರಸ್ಪರ ಅಭಿಪ್ರಾಯ ಭೇದವೇನಾದರೂ ಬಂದಲ್ಲಿ, ಅಂತಾ ಸಂಗತಿಯನ್ನು ಇಂಡಿಯಾ ಗವರ್ನಮೆಂಟಿನವರ ತೀರ್ಮಾನಕ್ಕಾಗಿ ಮೈಸೂರ್ ಗವರ್ನಮೆಂಟಿನವರ ಮೂಲಕ ಅರಿಕೆ ಮಾಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನ ಜಡ್ಜ್‌ಮೆಂಟ್ ಇಂಡಿಯಾ ಗವರ್ನಮೆಂಟಿನವರು ತಿಳಿಸಬಹುದಾದ ತೀರ್ಮಾನಕ್ಕೆ ಅನುಸರಿಸಿನಿರತಕ್ಕದ್ದು.

ಕಮ್ಮಿಷನರುಗಳಿಗೆ ಭಿನ್ನಾಭಿಪ್ರಾಯ ಹುಟ್ಟಿದಾಗ ಆಚರಿಸಬೇಕಾದ ನಡವಡಿಕೆ.

11. ಸದರೀ ಸ್ಪೆಷಲ್ ಕೋರ್ಟಿನ ಖರ್ಚು ಪ್ರಥಮತಃ ಮೈಸೂರ್ ಗವರ್ನಮೆಂಟಿನವರಿಂದ ಕೊಡಲ್ಪಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನಿಂದ ಈ ವಿಚಾರದಲ್ಲಿ ಮಾಡಲ್ಪಡತಕ್ಕ ಸಿಫಾರಿಷಿನ ಮೇಲೆ ಇಂಡಿಯಾ ಗವರ್ನಮೆಂಟಿನವರು ತೀರ್ಮಾನಿಸಬಹುದಾದ ರೀತಿಯಲ್ಲಿ ಆಖೈರಿಗೆ ವಿಲೆಯಾಗತಕ್ಕದ್ದು.

ಸ್ಪೆಷಲ್ ಕೋರ್ಟಿನ ಖರ್ಚಿನ ಸಂದಾಯ.

12. ಈ ರೆಗ್ಯುಲೇಷನ್ ಪ್ರಕಾರ ಸದರೀ ಸ್ಪೆಷಲ್ ಕೋರ್ಟಿನವರು ಕೊಡುವ ಆಖೈರ್ ಫೈಸಲನ್ನು ಅವರು ಮೈಸೂರ್ ಗವರ್ನಮೆಂಟಿಗೆ ಒಪ್ಪಿಸತಕ್ಕದ್ದು, ಮತ್ತು ಆ ತರುವಾಯ ಈ ರೆಗ್ಯುಲೇಷನಿನಂತೆ ನಡಿಯುವ ಸದರೀ ಕೋರ್ಟಿನ ಕೆಲಸಗಳು, ಅಧಿಕಾರಗಳು ಮುಗಿದಂತೆ ನಿಷ್ಕರ್ಷೆಯಾಗತಕ್ಕದ್ದು.

ಆಖೈರ್ ಫೈಸಲಿಗೆ ಅನಂತರ ಕೋರ್ಟು ಮುಗಿಯಷಕ್ಕದ್ದು.

13. ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಫೈಸಲನ್ನು ಮೈಸೂರ್ ಗವರ್ನಮೆಂಟಿನವರು ಕ್ರಮ ಪ್ರಕಾರ ಜಾರಿವಾಡತಕ್ಕದ್ದು, ಮತ್ತು ಅಂತ ಜಡ್ಜ್‌ಮೆಂಟಿನಿಂದ ಅಜ್ಞಾಪಿಸಲ್ಪಟ್ಟ ಯಾವದಾದರೂ ಹಣ ಪಾವತಿಯನ್ನಾಗಲಿ ಅಥವಾ ಇತರ ವಿಲೇವಾರಿಯನ್ನಾಗಲಿ ಮಾಡುವದಕ್ಕೆ ಮುಂಚೆ, ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜ್‌ಮೆಂಟಿನಲ್ಲಿ ನಮೂದಿಸಲ್ಪಟ್ಟಿರಬಹುದಾದ ಷರತ್ತುಗಳು ಮತ್ತು ಭರವಸೆಗಳು ಪೂರಾ ಜಾರೀಲಿ ಬರುವದಕ್ಕೋಸ್ಕರವಾಗಿ, ತಮಿಗೆ ಯುಕ್ತ ತೋಚಬಹುದಾದಂತೆ, ಏರ್ಪಾಡುಗಳನ್ನು ಮಾಡಿ ಜಾಮೀನುಗಳನ್ನು ಪಡಿಯತಕ್ಕದ್ದು.

ಆಖೈರ್ ಫೈಸಲನ್ನು ಮೈಸೂರ್ ಗವರ್ನಮೆಂಟಿನವರು ಜಾರಿವಾಡತಕ್ಕದ್ದು.

14. ಸದರೀ 5,67,338—15—1 (ಐದುಲಕ್ಷವೂ ಅರವತ್ತೇಳು ಸಾವಿರದ ಮುನ್ನೂರು ಮೂವತ್ತೆಂಟು ರೂಪಾಯಿ, ಹದಿನೈದಾಣೆ, ಒಂದುಪೈನ ಮೊಬಲಗು ಅಥವಾ ಅದರ ಪೈಕಿ ಯಾವ ಭಾಗದ ವಿಷಯದಲ್ಲಾಗಲಿ, ಅಥವಾ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿ ಮಾಡೋಣದಲ್ಲಿ ಮಾಡಲ್ಪಟ್ಟ ಸಂದಾಯ ಅಥವಾ ನಡಿಸಲ್ಪಟ್ಟ ಕೃತ್ಯದ ವಿಷಯದಲ್ಲಾಗಲಿ, ಅಥವಾ ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜ್‌ಮೆಂಟಿನ 'ಅಭಿಪ್ರಾಯ'ಗಳ ವಿಷಯದಲ್ಲಾಗಲಿ, ಯಾವ ಸಿವಿಲ್ ಕೋರ್ಟಿನವರೂ ಯಾಜ್ಞ್ಯಾರಿಯನ್ನು ಚಲಾಯಿಸತಕ್ಕದ್ದಲ್ಲ

ಸಿವಿಲ್ ದಾವೆಗಳಿಗೆ ಆಟಂಕ.

ಕೆ. ಶೇಷಾದ್ರಿ ಐಯ್ಯರ್,
ಮೈಸೂರ್ ಸಂಸ್ಥಾನದ ದಿವಾ.